**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯದಲ್ಲಿ, ಜಗಳೂರು.**

**ಸಿ.ಸಿ. ನಂಃ 817/2023**

| ಫಿರ್ಯಾದುದಾರರು | ವಿರುದ್ಧ | ಆರೋಪಿತರು |
|---|---|---|
| ಜಗಳೂರು ಪೊಲೀಸ್ ಠಾಣೆ, | 1. | ಮೊಹಮದ್ ರಫೀಕ ಯಾನೆ ಮಹಮದ್ ರಫಿ, ತಂದೆ ಹುಸೇನ್ ಸಾಬ್, 46 ವರ್ಷ, ಕೂಲಿ ಕೆಲಸ, ವಾಸಃಅಜಾದ್ ನಗರ, ಗ್ರಾಮ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ |

**ಆಪಾದನೆ**

ದಿನಾಂಕ 23.03.2023 ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಜಗಳೂರು ಪೊಲೀಸ್ ಠಾಣಾ ವ್ಯಾಪ್ತಿಯ ಜಗಳೂರು ಪಟ್ಟಣದ ಲಿಂಗಣ್ಣನಹಳ್ಳಿ ಕ್ರಾಸ್ ಹತ್ತಿರದ ಬಡ್ಡಿ ಸಿದ್ದಪ್ಪ ಇವರ ಜಮೀನಿನ ಪಕ್ಕದಲ್ಲಿ ಹಾದುಹೋಗಿರುವ ಜಗಳೂರು ಬಿದರಕೆರೆ ರಸ್ತೆಯಲ್ಲಿ, ಆರೋಪಿಯಾದ ನೀವು ಕೆ.ಎ:16/ಇ.ಟಿ.9150 ಸಂಖ್ಯೆಯ ಮೋಟಾರ ಸೈಕಲ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿರುತ್ತೀರಿ, ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಅಪರಾಧ ಮಾಡಿದ್ದೀರೆಂದು ಆಪಾದಿಸಲಾಗಿದೆ.

ಮೇಲೆ, ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯಾದ ನೀವು ನಿಮ್ಮ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಟಾರ ರಸ್ತೆಯಿಂದ ಕಚ್ಚಾ ರಸ್ತೆಗೆ ಇಳಿಸಿದ್ದರಿಂದ ಮೋಟಾರ ಸೈಕಲ ನಲ್ಲಿ ಹಿಂದೆ ಕುಳಿತಿದ್ದ ಇಮಾಂ ಬೀ ರವರು ಕೆಳಗೆ ಬಿದ್ದು ಗಾಯಗೊಂಡಿದ್ದು ನಂತರ ಜಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಹೂವಿನ ಹಡಗಲಿಯಲ್ಲಿ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದು ನಂತರ ದಿನಾಂಕಃ 29.03.2023 ರಂದು ಇಮಾಂ ಬೀ ರವರಿಗೆ ವಾಂತಿ ಮತ್ತು ತಲೆನೋವು ಬಂದಿದ್ದರಿಂದ ಅವರನ್ನು ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಸೇರಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಅದೇ ದಿನ ಬೆಳಿಗ್ಗೆ 11.40 ಗಂಟೆಗೆ ಇಮಾಂ ಬೀ ರವರು ಮೃತಪಟ್ಟಿರುತ್ತಾರೆ, ಆದ್ದರಿಂದ ನೀವು ಕಲಂ ಭಾರತೀಯ ದಂಡ ಸಂಹಿತೆ ಕಲಂ 304–ಎ-ರ ಅಡಿಯಲ್ಲಿ ಅಪರಾಧ ಮಾಡಿದ್ದೀರೆಂದು ಆಪಾದಿಸಲಾಗಿದೆ.

ದಿನಾಂಕಃ 21/08/2024.

ಸಿವಿಲ್ ನ್ಯಾ. ಹಾಗೂ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಜಗಳೂರು.

**<u>ಆರೋಪಿತರ ಹೇಳಿಕೆ</u>**

ಪ್ರಶ್ನೆ:- ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?
ಉತ್ತರ:

ಪ್ರಶ್ನೆ:- ಸದರಿ ಆಪಾದನೆಯನ್ನು ನೀವು ಒಪ್ಪಿಕೊಳ್ಳುವರೋ ಅಥವಾ ವಿಚಾರಣೆ ನಡೆಯಬೇಕೆ?
ಉತ್ತರ:-

ಈ ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆಗದುಕೊಂಡಿದ್ದು, ಸದರಿ ಹೇಳಿಕೆಯು ಆರೋಪಿತ ನೀಡಿದ ನಿಜವಾದ ಹೇಳಿಕೆ ಇರುತ್ತದೆ.

ದಿನಾಂಕ: 21/08/2024

ಸಿವಿಲ್ ನ್ಯಾ. ಹಾಗೂ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಜಗಳೂರು.